<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯದಂಡಾಧಿಕಾರಿಯವರ ನ್ಯಾಯಾಲಯ, ಪೊನ್ನಂಪೇಟೆ.</u>

## ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 1013 /2021 .

ಪ್ರಾ.ಸಾ. : 2
ಚಾ.ಸಾ. : 2

| | | |
|---|---|---|
| ಹೆಸರು | : | ರಕ್ಷಿತ್ |
| ತಂದೆಯ ಹೆಸರು | : | ಪ್ರಕಾಶ್ ಬಿ. ಆರ್ |
| ವಯಸ್ಸು | : | 34 ವರ್ಷ |
| ಉದ್ಯೋಗ | : | ಖಾಸಗಿ |
| ವಿಳಾಸ | : | ಬಾಳೆಲೆ |

... ........................................................................................................ ...

ದಿನಾಂಕ 13 ನೇ ಡಿಸೆಂಬರ್ 2023 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ- ಮಾನ್ಯ ಸ ಸ ಅ ರವರಿಂದ</u> : -

ಆರೋಪಿ 1 ಪರಿಚಯ. ಚಾಸಾ 1, 3, 4 ಪರಿಚಯ. ಅವರು ನಮ್ಮ ಜೊತೆ ಕೆಲಸ ಮಾಡುತ್ತಿದ್ದರು. ನಾನು 2021 ರಲ್ಲಿ ಗೋಣಿಕೊಪ್ಪ ಅಪೊಲೋ Formacy ಯಲ್ಲಿ ಕೆಲಸ ಮಾಡಿದ್ದೆ. ಸದರಿ Formacy ಯನ್ನು ಬೆ. 7 ರಿಂದ ರಾತ್ರಿ 10.30 ಗಂಟೆ ತನಕ ತೆಗೆಯಲಾಗಿತ್ತು ಎನ್ನುತ್ತಾರೆ. ನಾವು ಪ್ರತಿದಿನ ವ್ಯಾಪಾರದಿಂದ ಬಂದ ಹಣವನ್ನು ಅಂಗಡಿಯ ಕ್ಯಾಶ್ ಡ್ರಾಯರ್ ನಲ್ಲಿ ಇಡುತ್ತಿದ್ದೆವು ಮರದಿನ ಬ್ಯಾಂಕ್‌ಗೆ ಕಟ್ಟುತ್ತಿದ್ದೆವು. ದಿ. 09.05.2021 ರಂದು ನಾನು ರಾತ್ರಿ ಅಂಗಡಿಯ ಬಾಗಿಲು ಹಾಕಿ ನಾನು ಮತ್ತು ಚಾಸಾ 1 ಮನೆಗೆ ಹೋೀಗಿರುತ್ತೇವೆ. ಆ ದಿನದ ಹಣ ಒಟ್ಟು 68,000/- ರೂ ಹಣವನ್ನು ನಾನು ಮತ್ತು ಚಾಸಾ 1 ಎಣಿಕೆ ಮಾಡಿ ಅಂಗಡಿಯ ಕ್ಯಾಶ್ ಡ್ರಾಯರ್ ನಲ್ಲಿ ಇಟ್ಟು ಮನೆಗೆ ಹೋಗಿರುತ್ತೇವೆ. ಮರುದಿನ ಚಾಸಾ 1 ಬೆಳಿಗ್ಗೆ ಅಂಗಡಿ ಬಾಗಿಲು ತೆಗೆದಾಗ ಕ್ಯಾಶ್ ಡ್ರಾಯರ್ ನಲ್ಲಿ ಹಣ ಇರಲಿಲ್ಲ. ಆಗ ಚಾಸಾ 1 ಸದರಿ ವಿಚಾರವನ್ನು ನನಗೆ ದೂರವಾಣಿ ಕರೆ ಮಾಡಿ ತಿಳಿಸಿರುತ್ತಾರೆ. ಅಂಗಡಿಯಲ್ಲಿದ್ದ ಸಿ.ಸಿ. ಕ್ಯಾಮೆರಾವನ್ನು ಪರಿಶೀಲಿಸಿದಾಗ ವಿರುಪಾಕ್ಷ ಮತ್ತು ಮತ್ತೊಬ್ಬರು ದಿನಾಂಕ 09.05.2021 ರಂದು ಬೆಳಿಗಿನ ಜಾವ 5 ರಿಂದ 5.30 ರ ವೇಳೆಗೆ ಅಂಗಡಿಗೆ ಬಂದು ಹಣ ಕಳ್ಳತನ ಮಾಡಿರುವುದು ಕಂಡು ಬಂತು. ಆನಂತರ ಗೋಣಿಕೊಪ್ಪ ಪೊ. ಠಾಣೆಗೆ ದೂರು ನೀಡಿದೆವು. ಅಂಗಡಿಯಲ್ಲಿ 68,000/- ಹಣ, ಮೆಡಿಸಿನ್, ಇಂಜಕ್ಷನ್ ಹಾಗೂ ಸಿ.ಸಿ. ಟಿ. ವಿ ಮೋಡಮ್ ಕಳ್ಳತನ ಆಗಿರುವುದು ಕಂಡು ಬಂತು.

(ಈ ಹಂತದಲ್ಲಿ ಸ.ಸ.ಅ.ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿಕೊಂಡ ಮೇರೆಗೆ ದಾಖಲೆಗಳನ್ನು ಪರಿಶೀಲಿಸಿ ಹಾಗೂ ಸ.ಸ.ಅ.ರವರ ವಾದವನ್ನು ಆಲಿಸಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು.)

ಪಾಟೀ ಸವಾಲು: - ಮಾನ್ಯ ಸ ಸ ಅ ರವರಿಂದ : -

ದಿ. 09.05.2021 ರಂದು ಸಹ ನಾನು ಮತ್ತು ಚಾಸಾ 1 ಇಡೀ ದಿನ ವ್ಯಾಪಾರ ಮಾಡಿ ಬಂದಿದ್ದ ರೂ. 68,000/- ಹಣವನ್ನು ಕ್ಯಾಶ್ ಡ್ರಾಯರ್‌ನಲ್ಲಿ ಇಟ್ಟು ಹೋಗಿದ್ದೇನೆ ಎಂದರೆ ಸರಿ. ಮರುದಿನ ಚಾಸಾ 1 ಅಂಗಡಿ ಬಾಗಿಲು ತೆಗೆದೆ ಎಂದರೆ ಸರಿ. ಆಗ ಕ್ಯಾಶ್ ಡ್ರಾಯರ್‌ನಲ್ಲಿ ಇದ್ದ ಹಣ ಕಾಣಲಿಲ್ಲ ಎಂದರೆ ಸರಿ. ಸಿ. ಸಿ. ಟಿ. ವಿ ಪರಿಶೀಲಿಸಿದಾಗ ದಿನಾಂಕ 10.05.2021 ರಂದು ಬೆಳಗಿನ ಜಾವ 5 ರಿಂದ 5.30 ರವರ ಸಮಯದಲ್ಲಿ ಒಬ್ಬ ವ್ಯಕ್ತಿ ಆತನ ಬಳಿ ಇದ್ದ ಕೀಯಿಂದ ಅಂಗಡಿ ಬಾಗಿಲನ್ನು ತೆಗೆದು ಆತ ಮತ್ತು ಮತ್ತೊಬ್ಬ ಇಬ್ಬರು ಒಳಗಡೆ ಹೋಗಿ ಹಣ ತೆಗೆದುಕೊಂಡು ಹೋಗಿದ್ದಾರೆ ಎಂದು ತಿಳಿಯಿತು ಎಂದರೆ ಸರಿ. ಸದರಿ ವ್ಯಕ್ತಿ ನಮ್ಮ ಅಂಗಡಿಯಲ್ಲಿ ಹಿಂದೆ ಕೆಲಸ ಮಾಡಿದ್ದ ವಿರೂಪಾಕ್ಷ ಎಂದು ನನಗೆ ತಿಳಿಯಿತು ಎಂದರೆ ಸರಿ. ಈ ಬಗ್ಗೆ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ 1 ಮೃತರಾಗಿರುತ್ತಾರೆ. ಆರೋಪಿ 2 ರವರನ್ನು ಗುರುತಿಸಲು ಯಾವುದೇ ತಕರಾರು ಇಲ್ಲ ಎನ್ನುತ್ತಾರೆ.

ಪಾಟೀ ಸವಾಲು :- ಅರೋಪಿ ಪರ ವಕೀಲರವರಿಂದ :-

ನಾನು ಆ ದಿನ ಅಂಗಡಿಗೆ ಬೆ. 11 ಗಂಟೆಗೆ ಬಂದಿರುತ್ತೇನೆ. ನಮ್ಮ ಮನೆ ಬಾಳೆಲೆಯಲ್ಲಿ ಇದೆ. ಚಾಸಾ 1 ಗೋಣಿಕೊಪ್ಪದಲ್ಲಿ ಅಂಗಡಿಯಿಂದ ಸುಮಾರು ಅರ್ದ. ಕಿ. ಮೀ ದೂರ ದಲ್ಲಿ ವಾಸ ಇದ್ದರು. ಅಂಗಡಿಗೆ ಬಂದ ನಂತರ ವಿಚಾರ ತಿಳಿಯಿತು. ಸಿ.ಸಿ. ಕ್ಯಾಮೆರಾದಲ್ಲಿ ಮತ್ತೊಬ್ಬ ವ್ಯಕ್ತಿ ಯಾರು ಎಂದು ನನಗೆ ತಿಳಿಯಲಿಲ್ಲ ಎಂದರೆ ಸರಿ. ಪೊ. ಠಾಣೆಗೆ ಮಧ್ಯಾಹ್ನ ಕ್ಕೆ ಹೋದೆವು. ಸಿ.ಸಿ.ಟಿ. ವಿ ಪರಿಶೀಲಿಸಲು ಹಾಗೂ ಮೇಲಾಧಿಕಾರಿಗಳಿಗೆ ವಿಚಾರ ತಿಳಿಸಿ ಪೊ. ಠಾಣೆಗೆ ತಡವಾಗಿ ಹೋದೆವು. ವಿರೂಪಾಕ್ಷ

ನಮ್ಮ ಜೊತೆ ಕೆಲಸ ಮಾಡುತ್ತಿದ್ದರು ಹಾಗಾಗಿ ಪರಿಚಯ

ಘಟನೆ ನಡೆಯುವ 2 ತಿಂಗಳ ಹಿಂದೆ ವಿರೂಪಾಕ್ಷ ಕೆಲಸ ಬಿಟ್ಟಿದ್ದರು. ವಿರೂಪಾಕ್ಷರವರನ್ನು ಪೊ. ಠಾಣೆಯಲ್ಲಿ ನೋಡಿರುತ್ತೇನೆ. 2 ನೇ ಆರೋಪಿಯನ್ನು ಪೊ. ಠಾಣೆಯಲ್ಲಿ ನೋಡಿರುವುದಿಲ್ಲ. ಕಳ್ಳತನ ಮಾಡಿದ್ದು ಯಾರು ಎಂದು ನನಗೆ ತಿಳಿಯಲಿಲ್ಲ ಎಂದರೆ ಸರಿಯಲ್ಲ. ವಿರೂಪಾಕ್ಷರವರು ಕಳ್ಳತನ ಮಾಡಿರುವುದು ಎಂದು ನಮಗೆ ಸಿ.ಸಿ. ಕ್ಯಾಮೆರಾ ನೋಡಿದಾಗ ತಿಳಿಯಿತು ಎನ್ನುತ್ತಾರೆ.

**ಮರುವಿಚಾರಣೆ** :- - ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಗಿರುತ್ತದೆ)
ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

Sd/xxx-
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.

(ಸಾಕ್ಷಿಯವರ ಸಹಿ)